| | |
|---|---|
| **Program Name:** | **Remembrance Program of Educationist and founder president Sri. Mahadevappa Rampure.** |
| **Chief Guest with Designation:** | **Sri. Venugopal Jewargi**<br><br>Campus coordinator of SP&JMB college |
| **President with Designation:** | **Sri. Md. Varis**<br><br>Principal of SP&JMB college |
| **Other notable guest with Designation:** | **Dr. C. V. Kalburgi** (Head, Department of Rural development)<br>**Dr. Balraj Saraf** (Head, Department of Economics)<br>**Dr. C. M. Sutar** (Head, Department of Chemistry) |
| **Organized by:** | **IQAC**<br><br>S. P. Arts, Science & J. M. Bohara Commerce College, Shorapur |
| **Date:** | 06/02/2024 |
| **Time:** | 10:30 am |
| **Venue:** | Auditorium Hall |
| **Student Attendance:** | 45 |


GPS Map Camera
Long 76.755204°
06/02/24 11:33 AM GMT +05:30
Google


GPS Map Camera
Google
Shorapur, Karnataka, India
GQG4+W3R SP College, SH 60, Shorapur, Talwargera, Karnataka 585224, India
Lat 16.527557°
Long 76.755198°
06/02/24 11:33 AM GMT +05:30



# ಶಿಕ್ಷಣ ಶಿಲ್ಪಿ ಮಹಾದೇವಪ್ಪ ರಾಂಪುರೆ ಪುಣ್ಯಸ್ಮರಣೆ



ಸುರಪುರ ಶ್ರೀಪ್ರಭು ಪದವಿ ಕಾಲೇಜಿನಲ್ಲಿ ಹೈಕಶಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ದಿ.ಮಹಾದೇವಪ್ಪ ರಾಂಪುರೆಯವರ ಪುಣ್ಯಸ್ಮರಣೆ ಆಚರಿಸಲಾಯಿತು.

**ವಿಕ ಸುದ್ದಿಲೋಕ** ಸುರಪುರ

ಇಲ್ಲಿಯ ಶ್ರೀ ಪ್ರಭು ಪದವಿ ಕಾಲೇಜಿನ ಸಭಾಂಗಣದಲ್ಲಿ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ, ಶಿಕ್ಷಣ ಶಿಲ್ಪಿ ದಿ.ಮಹಾದೇವಪ್ಪ ರಾಂಪುರೆ ಅವರ 51ನೇ ಪುಣ್ಯಸ್ಮರಣೆ ಮಂಗಳವಾರ ಆಚರಿಸಲಾಯಿತು.

ಮಹಾದೇವಪ್ಪ ರಾಂಪುರೆ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಲಾಯಿತು.

ಕಾಲೇಜಿನ ಸಾಂಸ್ಕೃತಿಕ ಕಾರ್ಯದರ್ಶಿ ಡಾ.ಸಾಯಿಬಣ್ಣ ಮೂಡಬೂಳ ಮಾತನಾಡಿ, ಮಹಾದೇವಪ್ಪ ರಾಂಪುರೆ ಓರ್ವ ವ್ಯಕ್ತಿಯಲ್ಲ, ಅವರೊಬ್ಬ ಶಕ್ತಿ. ಅವರನ್ನು ಬಹುಮುಖ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಿದೆ. ಅವರ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಕೊಡುಗೆಗಳು ಅಪಾರವಾಗಿವೆ. ಈ ಭಾಗದ ಶೈಕ್ಷಣಿಕ ಕ್ರಾಂತಿಯೊಂದಿಗೆ ಸಮಾಜಕ್ಕೆ ಮುಖಾಮುಖಿಯಾದ ಅವರ ಅನನ್ಯವಾದ ಹೆಗ್ಗುರುತುಗಳು ಸಮಾಜದಲ್ಲಿ ಅಚ್ಚೊತ್ತಿವೆ. ಅವರ ಮೌಲಿಕವಾದ ಕಾರ್ಯಗಳು ಸಮಾಜದಲ್ಲಿ ಬದಲಾವಣೆಯ ಮಹಾಪರ್ವವನ್ನು ಸೃಷ್ಟಿಸಿವೆ ಎಂದು ಹೇಳಿದರು.

ಕಾಲೇಜಿನ ಆವರಣ ಸಂಯೋಜಕ ಪ್ರೊ.ವೇಣುಗೋಪಾಲ ಜೇವರ್ಗಿ ಅಧ್ಯಕ್ಷತೆ ವಹಿಸಿ ಮಾತನಾಡಿ, ದಿ. ಮಹಾದೇವಪ್ಪ ರಾಂಪುರೆ ಅವರು ಹೈಕ ಮದನಮೋಹನ ಮಾಳವಿಯರಾಗಿದ್ದರು. ಈ ಭಾಗದಲ್ಲಿ ಅನೇಕ ಮಹಾವಿದ್ಯಾಲಯಗಳನ್ನು ತೆರೆದು ಶೈಕ್ಷಣಿಕ ಬರವನ್ನು ನಿಗಿಸಿದ್ದಾರೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದ ಹಲವು ಸಮುದಾಯಗಳಿಗೆ ಅವರು ಶೈಕ್ಷಣಿಕ ಐಕಾನ್ ಆಗಿದ್ದಾರೆ ಎಂದರು.

ಪ್ರಾಂಶುಪಾಲ ಪ್ರೊ.ಎಂ.ಡಿ.ವಾರೀಸ್ ಕುಂಡಾಲೆ, ನ್ಯಾಕ್ ಸಂಯೋಜಕ ಡಾ.ಸಿ.ವ್ಹಿ.ಕಲಬುರಗಿ ವೇದಿಕೆಯಲ್ಲಿದ್ದರು. ಉಪನ್ಯಾಸಕರಾದ ಡಾ.ಸಿ.ಎಂ.ಸುತಾರ, ಡಾ.ಬಾಲರಾಜ್ ಸರಾಫ್, ಮುನಿಷಕುಮಾರ, ಡಾ. ಅಡಿವೆಪ್ಪ, ಡಾ.ಗೌಡಪ್ಪಗೌಡ, ಎಸ್.ಎಂ.ಸಜ್ಜನ್, ಹಣಮಂತ ಸಿಂಘೆ, ಜ್ಯೋತಿ ಮಾಮಡಿ, ಡಾ. ಉಪೇಂದ್ರನಾಯಕ ಸುಬೇದಾರ್, ಸುನೀತಾ ಹಳ್ಳದ, ಮದಿಹಾ, ಮೌನೇಶ, ಮಲ್ಹಾರಾವ್ ಕುಲಕರ್ಣಿ, ಶಿವಕುಮಾರ ಕೊಳ್ಳಿ, ಶಿವು ಸತ್ಯಂಪೇಟೆ ಇದ್ದರು. ಡಾ. ಸುರೇಶ ಮಾಮಡಿ ನಿರೂಪಿಸಿದರು. ವಿಜಯಕುಮಾರ ಬಣಗಾರ ಸ್ವಾಗತಿಸಿದರು. ಅಮರೇಶ ವಂದಿಸಿದರು.

ಕನ್ನಡಪ್ರಭ

# ಮಹಾದೇವಪ್ಪ ರಾಂಪುರೆ ಪುಣ್ಯಸ್ಮರಣೆ

• **ಕನ್ನಡಪ್ರಭ ವಾರ್ತೆ** ಸುರಪುರ

ನಗರದ ಪ್ರಭು ಕಲಾ ವಿಜ್ಞಾನ ಮತ್ತು ಜೆ.ಎಂ. ಬೋಹರಾ ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ಮಂಗಳವಾರ ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ, ಶಿಕ್ಷಣ ಶಿಲ್ಪಿ ಮಹಾದೇವಪ್ಪ ರಾಂಪುರೆ ಅವರ 51ನೇ ಪುಣ್ಯಸ್ಮರಣೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಉಪನ್ಯಾಸಕ ಡಾ. ಸಾಯಿಬಣ್ಣ ಮೂಡಬುಳ, ದಿ. ಮಹಾದೇವಪ್ಪ ರಾಂಪುರೆ ಅವರು ಹೈದ್ರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯೆ ನೀಡಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗೆ ಕಾರಣೀಭೂತರಾಗಿದ್ದಾರೆ. ಅವರ ಸೇವೆ ಸದಾ ಸ್ಮರಣೀಯ ಎಂದರು.

ನಿವೃತ್ತ ಪ್ರೊ. ವೇಣುಗೋಪಾಲ ಜೇವರ್ಗಿ ಮಾತನಾಡಿದರು. ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಎಂ.ಡಿ. ವಾರಿಸ್, ಪ್ರಾಧ್ಯಾಪಕರಾದ ಡಾ. ಸಿ.ಎಂ. ಸುತಾರ, ಡಾ. ಬಾಲರಾಜ ಸರಾಫ್, ಮುನಿಷಕುಮಾರ, ಡಾ. ಅಡಿವೆಪ್ಪ, ಡಾ. ಗೌಡಪ್ಪಗೌಡ, ಎಸ್.ಎಂ. ಸಜ್ಜನ್, ಹಣಮಂತ ಸಿಂಘೆ, ಜ್ಯೋತಿ ಮಾಮಡಿ, ಡಾ. ಉಪೇಂದ್ರ ನಾಯಕ, ಸುನಿತಾ ಹಳ್ಳದ, ಮದಿಹಾ, ಮೌನೇಶ, ಕಚೇರಿ ಅಧೀಕ್ಷಕ ಮಲ್ಲಾರಾವ್ ಕುಲಕರ್ಣಿ, ಶಿವಕುಮಾರ ಕೊಳ್ಳಿ, ಶಿವು ಸತ್ಯಂಪೇಟೆ ಸೇರಿ ಇತರರಿದ್ದರು. ಐಶ್ವರ್ಯ ಮತ್ತು ಸಂಗಡಿಗರು ಪ್ರಾರ್ಥಿಸಿದರು. ವಿಜಯಕುಮಾರ ಬಣಗಾರ ಸ್ವಾಗತಿಸಿದರು. ಡಾ. ಸುರೇಶ ಮಾಮಡಿ ನಿರೂಪಿಸಿದರು. ಅಮರೇಶ ವಂದಿಸಿದರು.



ಸುರಪುರ ನಗರದ ಪ್ರಭು ಕಲಾ ವಿಜ್ಞಾನ ಮತ್ತು ಜೆ.ಎಂ. ಬೋಹರಾ ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ಮಂಗಳವಾರ ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಶಿಕ್ಷಣ ಶಿಲ್ಪಿ ಮಹಾದೇವಪ್ಪ ರಾಂಪುರೆ ಅವರ 51ನೇ ಪುಣ್ಯಸ್ಮರಣೆ ನಡೆಯಿತು.